# 2025-26 ನೇ ಸಾಲಿನ ಮಧುವನ ಮತ್ತು ಜೇನುಸಾಕಣೆ ಅಭಿವೃದ್ಧಿ ಯೋಜನೆ ಅನುಷ್ಠಾನದ ಮಾರ್ಗಸೂಚಿಗಳು

## I.ಯೋಜನೆಯ ಹೆಸರು: ಮಧುವನ ಮತ್ತು ಜೇನುಸಾಕಣೆ ಅಭಿವೃದ್ಧಿ ಯೋಜನೆ - ರಾಜ್ಯವಲಯ

**ಲೆಕ್ಕ ಶೀರ್ಷಿಕೆ: 2851-00-200-0-01 (ಯೋಜನೆ)- ಉ.ಶೀ:051**

## ii. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು :

ಜೇನುಗಾರಿಕೆಯು ಕೃಷಿ/ ತೋಟಗಾರಿಕೆ/ ಅರಣ್ಯ ಆಧಾರಿತವಾಗಿದ್ದು, ರೈತ ಸಮುದಾಯಕ್ಕೆ ಪೂರಕ ಆದಾಯ ತರುವಂತಹ ಉಪ ಉದ್ಯೋಗ ಹಾಗೂ ಲಾಭದಾಯಕ ಕೃಷಿ ಆಧಾರಿತ ಚಟುವಟಿಕೆಯಾಗಿದೆ. ಜೇನುಗಾರಿಕೆಯನ್ನು ಹೆಚ್ಚಿನ ಬಂಡವಾಳವಿಲ್ಲದೆ ಭೂರಹಿತ ಸಣ್ಣ, ಅತಿ ಸಣ್ಣ ರೈತ ಕಾರ್ಮಿಕರು, ಮಹಿಳೆಯರು, ಅಂಗವಿಕಲರು ಕೈಗೊಳ್ಳಬಹುದಾಗಿರುತ್ತದೆ. ಜೇನುಕೃಷಿ ಒಟ್ಟಾರೆ ಉತ್ತಮ ಉದ್ಯೋಗಾವಕಾಶ ಹಾಗೂ ಸಾಕಷ್ಟು ಆದಾಯವನ್ನು ಕೊಡಬಲ್ಲ ಉದ್ದಿಮೆಯಾಗಿದೆ.

ಜೇನು ಕೃಷಿಯ ಉಪಯುಕ್ತತೆ ಬಗ್ಗೆ ರಾಜ್ಯದ ರೈತರಿಗೆ ಹೆಚ್ಚಿನ ತಿಳುವಳಿಕೆ ನೀಡಿ ಜೇನುಗಾರಿಕೆಯನ್ನು ರಾಜ್ಯದಲ್ಲಿ ಸಮಗ್ರವಾಗಿ ಅಭಿವೃದ್ಧಿಗೊಳಿಸುವುದು ಅತ್ಯವಶ್ಯಕವಾಗಿದೆ. ಕರ್ನಾಟಕ ರಾಜ್ಯದಲ್ಲಿ ಜೇನುಗಾರಿಕೆಯನ್ನು ಸಮಗ್ರ ರೀತಿಯಲ್ಲಿ ಅಭಿವೃದ್ಧಿಗೊಳಿಸಲು ವಿಫುಲ ಅವಕಾಶಗಳಿದೆ. ಜೇನು ಉತ್ಪನ್ನಗಳ ಸುಮಾರು 20 ಪಟ್ಟು ಹೆಚ್ಚು ಉಪಯೋಗ ಜೇನುನೊಣಗಳು ನಡೆಸುವ ಪರಾಗ ಸ್ಪರ್ಶಕ್ರಿಯೆಯಿಂದ ಉಂಟಾಗುತ್ತದೆ. ಕೆಲವು ಸಮೀಕ್ಷೆಗಳ ಪ್ರಕಾರ ಶೇಕಡ 30ರಷ್ಟು ಆಹಾರ ಬೆಳೆಗಳು, ಶೇ.80ರಷ್ಟು ಹಣ್ಣು, ತರಕಾರಿ ಮತ್ತು ಅರಣ್ಯ ಬೆಳೆಗಳು ಹಾಗೂ ಶೇ.60 ಕ್ಕಿಂತಲೂ ಹೆಚ್ಚು ಬೀಜದಿಂದ ವಂಶಾಭಿವೃದ್ಧಿ ಹೊಂದುವ ಸಸ್ಯಗಳು ಪರಾಗಸ್ಪರ್ಶಕ್ಕಾಗಿ ಜೇನುನೊಣಗಳನ್ನೇ ಅವಲಂಭಿಸಿವೆ. ರಾಜ್ಯದಲ್ಲಿ ಲಭ್ಯವಿರುವ ಸಸ್ಯ ಸಂಪತ್ತು, ತಾಂತ್ರಿಕ ಮತ್ತು ಸಂಶೋಧನಾ ಸಂಪನ್ಮೂಲಗಳನ್ನು ಆಧರಿಸಿ ತೋಟಗಾರಿಕೆ ಮತ್ತು ಕೃಷಿ ಬೆಳೆಗಳಲ್ಲಿ ಉತ್ಪಾದನೆಯ ಹೆಚ್ಚಳ, ಉತ್ಪಾದಕತೆಯ ಸುಧಾರಣೆ ಹಾಗೂ ಗುಣಮಟ್ಟವನ್ನು ಸುಧಾರಿಸುವಂತಹ ಜೇನುಕೃಷಿ ಉತ್ತೇಜನ ಕಾರ್ಯಕ್ರಮಗಳನ್ನು 2025-26 ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.

2025-26 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ನಿಗಧಿತ ಅನುದಾನ ರೂ.200.00 ಲಕ್ಷಗಳು.

## iii. ಯೋಜನೆಯ ಉದ್ದೇಶಗಳು:

1. ರೈತರಿಗೆ ಜೇನು ಕೃಷಿ ಕುರಿತಂತೆ ತರಬೇತಿ ನೀಡಿ ಹೆಚ್ಚು ಜನರು ಜೇನು ಕೃಷಿಯಲ್ಲಿ ತೊಡಗುವಂತೆ ಮಾಡುವುದು.

2. ಜೇನುಸಾಕಣೆಯ ಮೂಲಕ ಕೃಷಿ / ತೋಟಗಾರಿಕೆ ಬೆಳೆಗಳಲ್ಲಿ ಪರಾಗ ಸ್ಪರ್ಶ ಕ್ರಿಯೆಯನ್ನು ಉತ್ತೇಜಿಸುವುದು.
3. ರೈತ ಸಮುದಾಯಕ್ಕೆ ಪೂರಕ ಆದಾಯ ತರುವಂತಹ ಉಪ ಉದ್ಯೋಗವಾಗಿ ಜೇನು ಕೃಷಿಯನ್ನು ಅಭಿವೃದ್ಧಿಪಡಿಸುವುದು.
4. ಜೇನು ಕೃಷಿಯ ಮೂಲಕ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ಅಗತ್ಯವಿರುವ ತಂತ್ರಜ್ಞಾನಗಳ ಅಭಿವೃದ್ಧಿ, ಪ್ರಚಾರ ಮತ್ತು ಪ್ರಸರಣೆ ಮಾಡುವುದು.

## iv. ರಾಜ್ಯವಲಯದ ಕಾರ್ಯಕ್ರಮಗಳ ಅಡಿ ವಿವಿಧ ಕಾಂಪೋನೆಂಟ್ ಗಳನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿ

### 1a. ರೈತರಿಗೆ ಹಾಗೂ ಜೇನು ಕೃಷಿ ಆಸಕ್ತರಿಗೆ ಜೇನುಕೃಷಿಯಲ್ಲಿ ತರಬೇತಿ ಕಾರ್ಯಕ್ರಮ .

ಉದ್ದೇಶ: ಫಲಾನುಭವಿಗಳಿಗೆ ಜೇನು ಕೃಷಿ ಕುರಿತಂತೆ ತರಬೇತಿ ನೀಡುವ ಮೂಲಕ ಜೇನು ಕೃಷಿ ಕೈಗೊಳ್ಳಲು ಉತ್ತೇಜಿಸುವುದು.

- ಜೇನು ಕೃಷಿ ಮಾಡಲು ಆಸಕ್ತಿ ಇರುವ ರೈತರನ್ನು ತರಬೇತಿಗೆ ಆಯ್ಕೆ ಮಾಡಿಕೊಳ್ಳುವುದು.
- ತರಬೇತಿಯಲ್ಲಿ ನಗರ/ಪಟ್ಟಣ ಪ್ರದೇಶಗಳ ಆಸಕ್ತ ಹವ್ಯಾಸಿ / ವೃತ್ತಿಪರ ಜೇನುಕೃಷಿಕರೂ ಸಹಾ ಭಾಗವಹಿಸಬಹುದಾಗಿರುತ್ತದೆ.
- ಒಂದು ತರಬೇತಿ ಕಾರ್ಯಕ್ರಮದಲ್ಲಿ ಗರಿಷ್ಠ 30 ಫಲಾನುಭವಿಗಳಿರತಕ್ಕದ್ದು.
- ತರಬೇತಿಯನ್ನು ಆಯಾ ಪ್ರದೇಶದಲ್ಲಿ ಸ್ಥಳೀಯವಾಗಿ ಸ್ಥಾಪಿತವಾಗಿರುವ ಜೇನು ಕೃಷಿ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ/ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಆಯೋಜಿಸುವುದು.
- ತರಬೇತಿ ನೀಡಲು ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ಸರ್ಕಾರೇತರ ಸಂಘ ಸಂಸ್ಥೆಗಳು ಮತ್ತು ತಾಂತ್ರಿಕವಾಗಿ ನಿಪುಣರಾಗಿರುವ ನಿವೃತ್ತ ಇಲಾಖಾ ಅಧಿಕಾರಿಗಳು / ಪ್ರಾಧ್ಯಾಪಕರು, ಪ್ರಗತಿಪರ ರೈತರು, ಜೇನು ಕೃಷಿ ವಿಷಯದಲ್ಲಿ ಪರಿಣಿತರಾದ ಯಾವುದೇ ಸಂಪನ್ಮೂಲ ವ್ಯಕ್ತಿಯನ್ನು ಆಯ್ಕೆ ಮಾಡಿ ತರಬೇತಿಯನ್ನು ನೀಡಲು ಇವರ ಸೇವೆಯನ್ನು ಪಡೆಯಬಹುದು.
- ಎರಡು ದಿವಸದ ತರಬೇತಿ ಅವಧಿಯಲ್ಲಿ ಮೊದಲನೇ ದಿನ ನಿಗಧಿತ ಪಠ್ಯಕ್ರಮಗಳ ಬೋಧನೆ ಮತ್ತು ಎರಡನೇ ದಿನ ಪ್ರಾಯೋಗಿಕ ತರಬೇತಿ ಮತ್ತು ಇಲಾಖಾ /ಪ್ರಗತಿಪರ ಜೇನುಕೃಷಿಕರ ಮಧುವನಗಳಲ್ಲಿ ಪ್ರಾತ್ಯಕ್ಷಿಕೆ / ಭೇಟಿ ನೀಡುವುದು.
- ಪ್ರತಿ ತರಬೇತಿಗೆ ಗರಿಷ್ಠ ರೂ.24,000/- ಗಳಂತೆ ವೆಚ್ಚ ಭರಿಸಬಹುದಾಗಿದ್ದು, ಪ್ರತಿ ಫಲಾನುಭವಿಗೆ ಪ್ರತಿ ದಿನಕ್ಕೆ ರೂ.400/- ರಂತೆ ವೆಚ್ಚ ಭರಿಸುವುದು. ವೆಚ್ಚದ ವಿವರಗಳು ಈ ಕೆಳಕಂಡಂತಿವೆ.

## ರೈತರ ತರಬೇತಿ ಕಾರ್ಯಕ್ರಮಗಳ ವೆಚ್ಚದ ವಿವರ

## (ಗರಿಷ್ಟ 30 ಫಲಾನುಭವಿಗಳಿಗೆ 2 ದಿನಕ್ಕೆ)

| ಕ್ರ.ಸಂ | ವಿವರಗಳು | | ಗರಿಷ್ಟ ಮೊತ್ತ |
|---|---|---|---|
| 1 | ತರಬೇತಿಯನ್ನು ಪಡೆಯಲು ಆಯ್ಕೆಯಾದ ಪ್ರತಿ ಫಲಾನುಭವಿಗೆ ತರಬೇತಿ ಭತ್ಯೆ | 100x30x2 | 6000 |
| 2 | Audio Visual aids ಮತ್ತು ಪೀಠೋಪಕರಣ ಬಾಡಿಗೆ (ಒಂದು ದಿನಕ್ಕೆ) | | 2500 |
| 3 | ಬ್ಯಾನರ್, ತಾಂತ್ರಿಕ ಮಾಹಿತಿ ಕರ ಪತ್ರ ಮುದ್ರಣ/ ಲೇಖನ ಸಾಮಗ್ರಿಗಳು | | 3000 |
| 4 | ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ (ಇಬ್ಬರಿಗೆ) | 750X2 | 1500 |
| 5 | ಫಲಾನುಭವಿಗಳಿಗೆ ಊಟ/ ಉಪಹಾರದ ವೆಚ್ಚ | 125x30x2 | 7500 |
| 6 | ಪ್ರಾಯೋಗಿಕ ತರಬೇತಿಗೆ ಮಧುವನಗಳಿಗೆ ಪ್ರವಾಸ ವೆಚ್ಚ | | 3500 |
| | **ಒಟ್ಟು** | | **24000** |

ತರಬೇತಿಗೆ ನಿಗಧಿಪಡಿಸಿದ ಒಟ್ಟು ವೆಚ್ಚವನ್ನು ಮೀರದಂತೆ ಅವಶ್ಯಕತೆಗೆ ಅನುಗುಣವಾಗಿ ಘಟಕವಾರು ನಿಗಧಿಪಡಿಸಿದ ಅನುದಾನದಲ್ಲಿ ಅಲ್ಪ ಬದಲಾವಣೆ ಮಾಡಿಕೊಳ್ಳಬಹುದಾಗಿರುತ್ತದೆ.

**1b. ಭಾಗಮಂಡಲ ಜೇನು ಕೃಷಿ ತರಬೇತಿ ಕೇಂದ್ರ, ಕೊಡಗು ಜಿಲ್ಲೆ ಮತ್ತು ಬಿಳಗಿ ಜೇನು ಕೃಷಿ ತರಬೇತಿ ಕೇಂದ್ರ, ಉತ್ತರ ಕನ್ನಡ ಜಿಲ್ಲೆ ಇಲ್ಲಿ ಮೂರು ತಿಂಗಳ ಜೇನು ಕೃಷಿಯ ಅರ್ಹತಾ ಪತ್ರ ತರಬೇತಿ ಆಯೋಜನೆ:**

**ಉದ್ದೇಶ:** ಜೇನು ಕೃಷಿಯಲ್ಲಿ ಆಸಕ್ತಿ ಇರುವ ರಾಜ್ಯದ 20 ಅಭ್ಯರ್ಥಿಗಳಿಗೆ(ಪ್ರತಿ ತರಬೇತಿ ಕೇಂದ್ರ ತಲಾ 10 ಜನರಂತೆ) ಮೂರು ತಿಂಗಳ ಅರ್ಹತಾ ಪತ್ರದ ತರಬೇತಿಯನ್ನು ಭಾಗಮಂಡಲ ಜೇನುಗಾರಿಕೆ ತರಬೇತಿ ಕೇಂದ್ರ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ ಹಾಗೂ ಬಿಳಗಿ ಜೇನು ಕೃಷಿ ತರಬೇತಿ ಕೇಂದ್ರ, ಸಿದ್ದಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇಲ್ಲಿ 3 ತಿಂಗಳ ಅವಧಿಯ ವಸತಿ ಸಹಿತ ಜೇನುಕೃಷಿ ತರಬೇತಿಯನ್ನು ಆಸಕ್ತ ರೈತ ಮಕ್ಕಳಿಗೆ ನೀಡಲಾಗುವುದು.

### ಫಲಾನುಭವಿಗಳ ಆಯ್ಕೆ ಮತ್ತು ಅನುಷ್ಠಾನ ಕ್ರಮಗಳು :

ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ "ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ" ಯ "ತೋಟಗಾರಿಕೆ ವಿಸ್ತರಣೆ" ಕಾರ್ಯಕ್ರಮದಡಿ (ಲೆಕ್ಕ ಶೀರ್ಷಿಕೆ: 2401-00-111-0-08) ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸುವುದು.

1. ರಾಜ್ಯದಲ್ಲಿ ಜೇನು ಕೃಷಿಯ ಬಗ್ಗೆ ಆಸಕ್ತಿ ಇರುವ ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರುವ ಪುರುಷ ಫಲಾನುಭವಿಗಳಿಗೆ ಜೇನು ಕೃಷಿಯ ಬಗ್ಗೆ ಮೂರು ತಿಂಗಳ ಅರ್ಹತಾ ಪ್ರಮಾಣ ಪತ್ರ ತರಬೇತಿ ಕಾರ್ಯಕ್ರಮವನ್ನು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಭಾಗಮಂಡಲದಲ್ಲಿ ಮತ್ತು ಬೀಳಗಿ ಜೇನು ಕೃಷಿ ತರಬೇತಿ ಕೇಂದ್ರ, ಸಿದ್ದಾಪುರ ತಾಲ್ಲೂಕು,ಉತ್ತರ ಕನ್ನಡ ಜಿಲ್ಲೆಇಲ್ಲಿ ಆಯೋಜಿಸುವುದು.
2. ತರಬೇತಿಯನ್ನು 1 ನೇ ನವಂಬರ್ ನಿಂದ 31 ನೇ ಜನವರಿ ವರೆಗೆ ಆಯೋಜಿಸುವುದು.
3. ತರಬೇತಿಯ ಅವಧಿಯಲ್ಲಿ ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ.1250/- ರಂತೆ ಶಿಷ್ಯವೇತನವನ್ನು ನೀಡಲಾಗುವುದು.
4. ತರಬೇತಿಯ ಅವಧಿಯಲ್ಲಿ ಪ್ರತಿ ಅಭ್ಯರ್ಥಿಗಳಿಗೆ ಉಚಿತ ವಸತಿ ಸೌಲಭ್ಯವನ್ನು ಒದಗಿಸಲಾಗುವುದು.
5. ತರಬೇತಿಯಲ್ಲಿ ಉನ್ನತ ಮಟ್ಟದ ಜೇನು ಕೃಷಿಯ ಸಂಪನ್ಮೂಲ ವ್ಯಕ್ತಿ/ಸಂಸ್ಥೆಗಳನ್ನು ಗುರುತಿಸಿ ಅವರಿಂದ ಅತಿಥಿ ಉಪನ್ಯಾಸವನ್ನು ಸಹ ಏರ್ಪಡಿಸುವುದು ಹಾಗೂ ಅತಿಥಿ ಉಪನ್ಯಾಸಕರಿಗೆ ಗೌರವಧನ ನೀಡುವುದು.
6. ತರಬೇತಿ ಅವಧಿಯಲ್ಲಿ ಫಲಾನುಭವಿಗಳಿಗೆ ಅಧ್ಯಯನ ಪ್ರವಾಸ ಏರ್ಪಡಿಸಿ ಪ್ರಗತಿಪರ ಜೇನುಕೃಷಿಕರ/ ಸಂಸ್ಕರಣಾ ಘಟಕಗಳಿಗೆ ಪ್ರವಾಸ ಕೈಗೊಳ್ಳುವುದು.
7. ಪ್ರತಿ ತರಬೇತಿ ತಂಡದಲ್ಲಿ ಗರಿಷ್ಠ 20 ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವುದು.
8. ತೋಟಗಾರಿಕೆ ವಿಸ್ತರಣೆ ಕಾರ್ಯಕ್ರಮದಡಿ ನಿಗಧಿತ ಅರ್ಜಿ ನಮೂನೆ ಪ್ರಕಾರ ಆಸಕ್ತಿಯುಳ್ಳ ಅಭ್ಯರ್ಥಿಗಳಿಂದ ಅರ್ಜಿ ಪಡೆದು ನೋಂದಾಯಿಸಿಕೊಳ್ಳುವುದು.
9. ತರಬೇತಿ ಪಡೆಯುವ ಅಭ್ಯರ್ಥಿಯು ಕನಿಷ್ಟ ಮೂರು ಗುಂಟೆ ಜಮೀನು/ ನಿವೇಶನ ಹೊಂದಿರಬೇಕು.
10. ತರಬೇತಿ ನಿರ್ವಹಣೆಗೆ ಭರಿಸಲಾದ ಖರ್ಚು ವೆಚ್ಚಗಳ ವಿವರಗಳನ್ನು ಆರ್ಥಿಕ ನೀತಿ ಸಂಹಿತೆ ಅನ್ವಯ ನಿರ್ವಹಿಸುವುದು.
11. ತರಬೇತಿ ನೀಡಲು ಇಲಾಖೆಯ ನುರಿತ ಅಧಿಕಾರಿಗಳು/ಸಿಬ್ಬಂದಿ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿರುವ ಜೇನು ಕೃಷಿ ತರಬೇತಿ ಕೇಂದ್ರ / ಜೇನು ಕೃಷಿ ಸಹಕಾರ ಸಂಸ್ಥೆ / ವಿಶ್ವವಿದ್ಯಾಲಯಗಳ ವತಿಯಿಂದ ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಉಪಯೋಗಿಸಿಕೊಳ್ಳುವುದು.
12. ತರಬೇತಿ ನಡೆಸಿದ ಬಗ್ಗೆ ಅಭ್ಯರ್ಥಿಗಳ ವಿವರಗಳು ಹಾಗೂ ಛಾಯಾ ಚಿತ್ರಗಳನ್ನು ದಾಖಲಿಸಿ, ತೋಟಗಾರಿಕೆ ಉಪ ನಿರ್ದೇಶಕರು, ಜಿಲ್ಲಾ ಪಂಚಾಯತ್, ಮಡಿಕೇರಿರವರ ಮುಖಾಂತರ ಕೇಂದ್ರ ಕಛೇರಿಗೆ ವರದಿ ಸಲ್ಲಿಸುವುದು.

## 2. ಜೇನು ಪೆಟ್ಟಿಗೆ, ಜೇನು ಕುಟುಂಬ ಹಾಗೂ ಸ್ಟ್ಯಾಂಡ್ ಖರೀದಿಗೆ ಸಹಾಯಧನ.

**ಉದ್ದೇಶ:** ರೈತರಿಗೆ/ ಆಸಕ್ತರಿಗೆ ಜೇನು ಪೆಟ್ಟಿಗೆ, ಕುಟುಂಬ ಹಾಗೂ ಸ್ಟ್ಯಾಂಡ್ ಗಳನ್ನು ನೀಡಿ ಆದಾಯ ಹೆಚ್ಚಿಸಿಕೊಳ್ಳಲು ನೆರವಾಗುವುದು ಹಾಗೂ ತೋಟಗಾರಿಕೆ ಮತ್ತು ಕೃಷಿ ಬೆಳೆಗಳ ಉತ್ಪಾದನೆ /ಉತ್ಪಾದಕತೆ ಹೆಚ್ಚಿಸುವುದು.

- ಫಲಾನುಭವಿಯು ISI-A ಮಾದರಿಯ ಕಾಡುಮರದಿಂದ ಮಾಡಿದ ತೇಗ/ಹೊನ್ನೆ/ಮತ್ತಿ ಮರದ 8 ಚೌಕಟ್ಟುಗಳುಳ್ಳ ಜೇನು ಸಂಸಾರ ಕೋಣೆ ಮತ್ತು ಜೇನು ಕೋಣೆಯುಳ್ಳ ಜೇನು ಪೆಟ್ಟಿಗೆಗಳನ್ನು ಮಾತ್ರ ಖರೀದಿಸತಕ್ಕದ್ದು(ಅನುಬಂಧ-2A).
- ಫಲಾನುಭವಿಯು ಖರೀದಿಸುವ ಕಬ್ಬಿಣದ ಸ್ಟ್ಯಾಂಡ್ ISI-A ಮಾದರಿಯ ತುಡುವೆ ಜೇನು ಪೆಟ್ಟಿಗೆಯನ್ನು ಇರಿಸಲು ಸೂಕ್ತವಾಗಿರಬೇಕು. ಸ್ಟ್ಯಾಂಡ್ ನ ಮಾದರಿ ಹಾಗೂ ಅಳತೆಗಳ ವಿವರಗಳನ್ನು ಕೃಷಿ ವಿಶ್ವವಿದ್ಯಾಲಯದಿಂದ ಪಡೆದಿದ್ದು, ಅನುಬಂಧ – 2B ರಲ್ಲಿ ಲಗತ್ತಿಸಿದೆ.
- ಜೇನು ಪೆಟ್ಟಿಗೆ, ಜೇನು ಕುಟುಂಬ ಹಾಗೂ ಸ್ಟ್ಯಾಂಡ್ ಹಾಗೂ ಖಾಸಗಿ ಮಧುವನಗಳ ಪರಿಕರಗಳನ್ನು ಸರಬರಾಜು ಮಾಡಲು ತೋಟಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟಿರುವ ಸರಬರಾಜುದಾರರನ್ನು ಮಾತ್ರ ಪರಿಗಣಿಸತಕ್ಕದ್ದು. (ಯಾವುದೇ ಕಾರಣಕ್ಕೂ ಇತರೆ ಇಲಾಖೆ ಅನುಮೋದಿತ ಸರಬರಾಜುದಾರರು ಅಥವಾ ಖಾಸಗಿ ಸರಬರಾಜುದಾರರನ್ನು ಪರಿಗಣಿಸತಕ್ಕದ್ದಲ್ಲ).
- ಅರ್ಹ ಫಲಾನುಭವಿಗಳು ಜೇನು ಪೆಟ್ಟಿಗೆ, ಜೇನು ಕುಟುಂಬ ಹಾಗೂ ಸ್ಟ್ಯಾಂಡ್ ಮತ್ತು ಖಾಸಗಿ ಮಧುವನಗಳ ಪರಿಕರಗಳನ್ನು ಇಲಾಖೆಯು ಅನುಮೋದಿಸಲ್ಪಟ್ಟಿರುವ ಸರಬರಾಜುದಾರರಿಂದ ಖರೀದಿಸಲು ತೋಟಗಾರಿಕೆ ಇಲಾಖೆಯಿಂದ ಅನುಮತಿ ಪತ್ರ ಪಡೆದು, ಅನುಮೋದಿತ ಸಂಖ್ಯೆಯ ಪರಿಕರಗಳ ಒಟ್ಟು ಮೊತ್ತವನ್ನು NEFT/RTGS/Digital Payment ಮುಖಾಂತರ ಮಾತ್ರ ಸರಬರಾಜುದಾರರಿಗೆ ಪಾವತಿಸಬೇಕು. (ಯಾವುದೇ ಕಾರಣಕ್ಕೂ ನಗದು, (cash)/ ಚೆಕ್ಕು (cheque)/ ಡಿಡಿ (DD) ಮುಖಾಂತರ ಪಾವತಿ ಪರಿಗಣಿಸತಕ್ಕದಲ್ಲ).
- ಸಹಾಯಧನ ಪಡೆಯಲು ಇಲಾಖೆಗೆ ಅರ್ಜಿ ಸಲ್ಲಿಸುವಾಗ ಅರ್ಜಿಯ ಜೊತೆಗೆ ಫಲಾನುಭವಿಯು ಅನುಮೋದಿತ ಸಂಖ್ಯೆಯ ಪರಿಕರಗಳ ಪೂರ್ಣ ಮೊತ್ತವನ್ನು ಫಲಾನುಭವಿಯ ಖಾತೆಯಿಂದ ಅನುಮೋದಿಸಲ್ಪಟ್ಟಿರುವ ಸರಬರಾಜುದಾರರ ಖಾತೆಗೆ NEFT/RTGS/ Digital Payment ಮುಖಾಂತರ ಪಾವತಿಸಿರುವ ರಶೀದಿ/Transaction Id ಮತ್ತು ಬ್ಯಾಂಕ್ ಖಾತೆಯ ನಂಬರ್ ನ್ನು ಇಲಾಖಾ ಅಧಿಕಾರಿಗಳು ಪಡೆದು ಖಾತ್ರಿ ಪಡಿಸಿಕೊಳ್ಳುವುದು ಹಾಗೂ ಫಲಾನುಭವಿ ಪೂರ್ಣ ಮೊತ್ತವನ್ನು ಅನುಮೋದಿತ ಸರಬರಾಜು ಸಂಸ್ಥೆಗೆ ಪಾವತಿಸಿರುವ ಬಗ್ಗೆ ಸರಬರಾಜು ಸಂಸ್ಥೆಯಿಂದ ದೃಢೀಕರಣ ಪತ್ರ ಪಡೆದು, ದೃಢೀಕರಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಹಾಯಧನಕ್ಕೆ ಅರ್ಜಿ ಸಲ್ಲಿಸುವುದು. ಅಂತಹ ಫಲಾನುಭವಿಗೆ ಸಹಾಯಧನದ ಮೊತ್ತವನ್ನು DBT ಮುಖಾಂತರ ಪಾವತಿಸುವುದು.
- ಅನುಮೋದಿತ ಸರಬರಾಜುದಾರರಿಂದ ಖರೀದಿಸಿದ ಜೇನು ಪೆಟ್ಟಿಗೆ, ಜೇನು ಕುಟುಂಬ ಹಾಗೂ ಸ್ಟ್ಯಾಂಡ್ ಮತ್ತು ಖಾಸಗಿ ಮಧುವನಗಳ ಪರಿಕರಗಳಿಗೆ, ಫಲಾನುಭವಿ ಪಾಲಿನ ಮೊತ್ತವನ್ನು ಮಾತ್ರ ಫಲಾನುಭವಿಯ ಖಾತೆಯಿಂದ ಅನುಮೋದಿತ ಸರಬರಾಜು ಸಂಸ್ಥೆಗಳಿಗೆ NEFT/RTGS/ Digital Payment ಮುಖಾಂತರ ಪಾವತಿಸಿದ್ದಲ್ಲಿ, ಸಂಬಂಧಿಸಿದ ಅನುಷ್ಠಾನಾಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು. ನಂತರ ಸದರಿ ಸಹಾಯಧನದ ಮೊತ್ತವನ್ನು ನೇರವಾಗಿ ಸರಬರಾಜುದಾರರ

ಖಾತೆಗೆ ಜಮೆ ಮಾಡಲು ಫಲಾನುಭವಿಯಿಂದ **ಒಪ್ಪಿಗೆ ಪತ್ರವನ್ನು** ಪಡೆದು, ಸಂಬಂಧ ಪಟ್ಟ ತಾಲ್ಲೂಕು ಹಿಸತೋನಿ, (ಜಿ.ಪಂ) ರವರು ಸರಬರಾಜುದಾರರ ಬ್ಯಾಂಕ್ ಖಾತೆಗೆ ನೇರವಾಗಿ ಸಹಾಯಧನದ ಮೊತ್ತವನ್ನು DBT ಮುಖಾಂತರ ಪಾವತಿಸುವುದು. **ಫಲಾನುಭವಿಗಳ ಅರ್ಜಿಗಳನ್ನು ಕಡ್ಡಾಯವಾಗಿ ಇಲಾಖೆಯ ಹಸಿರು ತಂತ್ರಾಂಶದ ಮೂಲಕವೇ ಪಡೆದು ಪರಿಶೀಲಿಸಿ, ಸಹಾಯಧನವನ್ನು DBT ಮುಖಾಂತರ ಪಾವತಿಸುವುದು.**

- ಫಲಾನುಭವಿಯು ಯಾವುದಾದರು ಬ್ಯಾಂಕ್ ನಿಂದ ಸಾಲ ಪಡೆದಿದ್ದಲ್ಲಿ ಸಹಾಯಧನ ಮೊತ್ತವನ್ನು ಸಂಬಂಧಿಸಿದ ಸಾಲದ ಖಾತೆಗೆ ಜಮಾ ಮಾಡುವುದು (ಇತರೆ ಯಾವುದೇ ರೀತಿಯ ಸಾಲಗಳಿಗೆ ಸರಿದೂಗಿಸಬಾರದು).
- ಮೇಲೆ ತಿಳಿಸಿರುವ ಅಂಶಗಳು ಸದರಿ ಯೋಜನೆಯ ಎಲ್ಲಾ ಚಟುವಟಿಕೆಗಳ ಸಹಾಯಧನ ವಿತರಣೆಗೆ ಅನ್ವಯಿಸುವುದು.
- ಜೇನು ಕುಟುಂಬದ ಅರ್ಹತೆ ಹಾಗೂ ಜೇನು ಪೆಟ್ಟಿಗೆ ಮತ್ತು ಸ್ಟ್ಯಾಂಡ್ ನ ಅಳತೆ ಹಾಗೂ ಗುಣಮಟ್ಟದ ಬಗ್ಗೆ ಸ್ಥಳೀಯವಾಗಿ ಲಭ್ಯವಿರುವ ಜೇನು ಕೃಷಿ ಸಿಬ್ಬಂದಿ / ಆಯಾ RSK ಅಧಿಕಾರಿಗಳ ದೃಢೀಕರಣ ಪಡೆಯತಕ್ಕದ್ದು.
- ಅನುಬಂಧ (3) ರಲ್ಲಿ ತಿಳಿಸಿರುವಂತೆ ಯೋಜನಾವಾರು ಜೇನು ಪೆಟ್ಟಿಗೆಗಳ ಕೋಡಿಂಗ್ ಪದ್ಧತಿಯನ್ನು ಕಡ್ಡಾಯವಾಗಿ ಪಾಲಿಸುವುದು.
- ಜೇನು ಪೆಟ್ಟಿಗೆಗಳ (ಯೋಜನಾವಾರು ನಿಗಧಿಪಡಿಸಿದ ಬಣ್ಣಗಳಿಗನುಗುಣವಾಗಿ) ಮುಚ್ಚಳದ ಮುಂಭಾಗದ ಎಡ ಬದಿಗೆ 4x3 ಇಂಚುಗಳ ಅಳತೆಯಲ್ಲಿ ಲಗತ್ತಿಸಿರುವ ಮಾಹಿತಿಗಳನ್ನು ಒಳಗೊಂಡ fibre / tin name plate ನ್ನು ಕಪ್ಪು ಬಣ್ಣದ ಮೇಲೆ ಬಿಳಿ ಅಕ್ಷರದಲ್ಲಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ (ಅನುಬಂಧ 2 C)
- ಜೇನು ಪೆಟ್ಟಿಗೆಗಳ ಬೆಲೆಯನ್ನು ಗರಿಷ್ಟ ರೂ.2000/- ಗಳಿಗೆ ಹಾಗೂ ಜೇನು ಕುಟುಂಬದ ಬೆಲೆಯನ್ನು ಗರಿಷ್ಟ ರೂ.2000/- ಗಳಿಗೆ ಸ್ಟ್ಯಾಂಡ್ ಗೆ ರೂ.500/-ಗಳಿಗೆ ನಿಗಧಿಗೊಳಿಸಲಾಗಿದೆ. ಜೇನು ಪೆಟ್ಟಿಗೆ, ಜೇನು ಕುಟುಂಬ ಹಾಗೂ ಸ್ಟ್ಯಾಂಡ್ ನ ಪ್ಯಾಕೇಜ್ ಗೆ ನಿಗಧಿಪಡಿಸಿದ ದರ ಗರಿಷ್ಟ ರೂ.4500/- ಗಳು.
- ಜೇನು ಪೆಟ್ಟಿಗೆ, ಜೇನು ಕುಟುಂಬ ಹಾಗೂ ಸ್ಟ್ಯಾಂಡ್ ಗೆ ಇತರರಿಗೆ ಶೇ.75 ರಂತೆ ರೂ.3375/- ಗಳ ಸಹಾಯಧನವನ್ನು ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ರೈತರಿಗೆ ಶೇ.90 ರಂತೆ ರೂ.4050/-ಗಳ ಸಹಾಯಧನವನ್ನು ನೀಡುವುದು.
- ಜೇನು ಕೃಷಿ ಅಭಿವೃದ್ಧಿಗೆ ಪೂರಕವಾಗಿ ಉತ್ತಮ ಗುಣಮಟ್ಟದ ಜೇನು ಪೆಟ್ಟಿಗೆ, ಜೇನು ಕುಟುಂಬ ಹಾಗೂ ಸ್ಟ್ಯಾಂಡ್ ಗಳನ್ನು ರಿಯಾಯಿತಿ ದರದಲ್ಲಿ ಆಸಕ್ತ ಫಲಾನುಭವಿಗಳಿಗೆ ವಿತರಿಸುವುದು. ಜೇನು ಕೃಷಿಯನ್ನು ಜಮೀನು ಹೊಂದಿರುವ ರೈತರಷ್ಟೇ ಅಲ್ಲದೆ ಜೇನು ಕೃಷಿಯಲ್ಲಿ ಆಸಕ್ತರಿರುವ ನಗರ ಪ್ರದೇಶದ ಫಲಾನುಭವಿಗಳು ಸಹ ಮಾಡಬಹುದಾಗಿರುತ್ತದೆ. ಇದಕ್ಕೆ ಹೆಚ್ಚಿನ ಜಾಗದ ಅಗತ್ಯವಿರುವುದಿಲ್ಲ. ಆದುದರಿಂದ ಜಮೀನು ಹೊಂದಿರುವ ಫಲಾನುಭವಿಗಳಷ್ಟೇ ಅಲ್ಲದೆ ಜಮೀನು ರಹಿತ ಫಲಾನುಭವಿಗಳು ಸಹಾ ಜೇನು ಪೆಟ್ಟಿಗೆ ಹಾಗೂ ಕುಟುಂಬಕ್ಕೆ ಸಹಾಯಧನ ಪಡೆಯಲು ಅರ್ಹರಿದ್ದು,

ಜಮೀನು ರಹಿತ ಗ್ರಾಮೀಣ ಪ್ರದೇಶದ ಹಾಗೂ ನಗರ/ಪಟ್ಟಣ ಪ್ರದೇಶದ ಫಲಾನುಭವಿಗಳು ವಿಳಾಸ ದೃಢೀಕರಣ ಪತ್ರ ನೀಡಿ ಸಹಾಯಧನ ಪಡೆಯಬಹುದಾಗಿರುತ್ತದೆ. ಜಮೀನು ಹೊಂದಿರುವ **ಫಲಾನುಭವಿಗಳು ಗರಿಷ್ಠ 10 ಜೇನು ಪೆಟ್ಟಿಗೆ, ಕುಟುಂಬ ಹಾಗೂ ಸ್ಟ್ಯಾಂಡ್ ಗಳಿಗೆ ಮತ್ತು ಜಮೀನು ರಹಿತ ಫಲಾನುಭವಿಗಳು ಗರಿಷ್ಠ 4 ಜೇನು ಪೆಟ್ಟಿಗೆ, ಕುಟುಂಬ ಹಾಗೂ ಸ್ಟ್ಯಾಂಡ್ ಗಳಿಗೆ ಸಹಾಯಧನ ಪಡೆಯಬಹುದಾಗಿರುತ್ತದೆ.**

- ಪ್ರತಿ ಜೇನು ಕುಟುಂಬದಲ್ಲಿ ಸುಮಾರು 4 ಫ್ರೇಮುಗಳು ಪೂರ್ಣ ತುಂಬಿರುವ ಆರೋಗ್ಯಕರ ಕೆಲಸಗಾರ ಜೇನು ದುಂಬಿಗಳು ಹಾಗೂ ಒಂದು ಪರಿಪಕ್ವವಾದ ರಾಣಿ ಜೇನು ದುಂಬಿ ಕಡ್ಡಾಯವಾಗಿ ಇರತಕ್ಕದ್ದು.

## 3. ಜೇನು ತೆಗೆಯುವ ಯಂತ್ರಕ್ಕೆ ಸಹಾಯಧನ:

- ಖಾಸಗಿ ಮಧುವನಗಳ ಸ್ಥಾಪನೆ ಕಾರ್ಯಕ್ರಮದಡಿ ಜೇನು ತೆಗೆಯುವ ಯಂತ್ರ ಖರೀದಿಗೆ ಅವಕಾಶವಿರುತ್ತದೆ. ಆದರೆ, ಜೇನು ಪೆಟ್ಟಿಗೆ ಮತ್ತು ಕುಟುಂಬಗಳ ಖರೀದಿಗೆ ಸಹಾಯಧನ ಪಡೆದ ರೈತರು ಜೇನು ತೆಗೆಯುವ ಯಂತ್ರವನ್ನು ಮಾತ್ರ ಖರೀದಿಸಲು ಇಚ್ಛಿಸಿದಲ್ಲಿ ಅಂತಹ ಫಲಾನುಭವಿಗಳಿಗೆ ಅವಕಾಶ ಮಾಡಲಾಗಿರುತ್ತದೆ. ಸ್ಟೇನ್ ಲೆಸ್ ಸ್ಟೀಲ್ ನ ಜೇನು ತೆಗೆಯುವ ಯಂತ್ರದ ದರ ರೂ.4,500/- ಗಳಿದ್ದು, ಎಲ್ಲಾ ವರ್ಗದ ರೈತರಿಗೆ ಶೇ.75 ರಷ್ಟು (ರೂ.3375/-) ಸಹಾಯಧನ ಒದಗಿಸಲಾಗುವುದು. ಜೇನು ಪೆಟ್ಟಿಗೆ ಮತ್ತು ಕುಟುಂಬಗಳಿಗೆ ಸಹಾಯಧನ ಪಾವತಿ ಮಾಡುವ ಬಗ್ಗೆ ಮೇಲೆ ವಿವರಿಸಿರುವ ವಿಧಾನವನ್ನು ಜೇನು ತೆಗೆಯುವ ಯಂತ್ರಕ್ಕೆ ಕೂಡ ಸಹಾಯಧನ ನೀಡಲು ಅನುಸರಿಸುವುದು.

## 4. ಮಧುವನಗಳ ಸ್ಥಾಪನೆಗೆ ಸಹಾಯ.

**ಉದ್ದೇಶ**: ರಾಜ್ಯದ ಜೇನುಕೃಷಿಯ ಅಭಿವೃದ್ಧಿಗೆ ಉತ್ತಮ ಗುಣಮಟ್ಟದ ಹಾಗೂ ರೋಗರಹಿತ ಜೇನು ಕುಟುಂಬಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸುವುದು ಅತ್ಯಂತ ಅಗತ್ಯವಿರುತ್ತದೆ. ಉತ್ತಮ ಗುಣಮಟ್ಟದ ಜೇನು ಕುಟುಂಬಗಳನ್ನು ಉತ್ಪಾದಿಸಿ ವಿತರಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

- ಸ್ಥಾಪಿಸಲು ಉದ್ದೇಶಿಸಿರುವ ಮಧುವನಗಳಲ್ಲಿ ಜೇನು ಕುಟುಂಬಗಳಲ್ಲಿ ಉತ್ತಮವಾದ ತಳಿಯನ್ನು ಆಯ್ಕೆ ಮಾಡಿಕೊಂಡು ಅವುಗಳಲ್ಲಿ ಅಭಿವೃದ್ಧಿ ಪಡಿಸತಕ್ಕದ್ದು.
- ಮೊಟ್ಟೆ ಇಡುವಂತಹ ರಾಣಿಯು ಹೆಚ್ಚಾಗಿ ಕೆಲಸಗಾರ ಮೊಟ್ಟೆಯನ್ನಿಡುವಂತಿದ್ದು, ರೋಗ ನಿರೋಧಕ ಶಕ್ತಿ ಹೊಂದಿರಬೇಕು.
- ಮಧುವನದಲ್ಲಿರುವ ಜೇನು ಕುಟುಂಬಗಳು ಪದೇ ಪದೇ ಪಲಾಯನ ಮಾಡುವ ಹವ್ಯಾಸವಿರಬಾರದು.
- ಕುಟುಂಬದ ಪ್ರಜಾ ಸಂಖ್ಯೆ ಯಾವ ಕಾಲದಲ್ಲೂ ಹೆಚ್ಚಾಗಿರುವಂತಿರತಕ್ಕದ್ದು.

- ಕೆಲಸಗಾರ ಜೇನುದುಂಬಿಯು ಹೆಚ್ಚು ದೂರ ಹಾರುವ ಶಕ್ತಿಯನ್ನು ಹೊಂದಿರಬೇಕು.
- ಹೆಚ್ಚು ಪರಾಗ ಮತ್ತು ಪುಷ್ಪರಸ ಸಂಗ್ರಹಿಸುವ ಗುಣ ಹೊಂದಿರಬೇಕು.

ಈ ಎಲ್ಲಾ ಗುಣಗಳನ್ನು ಹೊಂದಿರುವ ಜೇನುಕುಟುಂಬಗಳನ್ನು ಮಧುವನಗಳಲ್ಲಿ ಅಭಿವೃದ್ಧಿ ಪಡಿಸಿ ಅದರಿಂದ ಜೇನುಕೃಷಿಕರಿಗೆ ಮರಿಜೇನು ಕುಟುಂಬಗಳನ್ನು ತಯಾರಿಸಿ ವಿತರಿಸತಕ್ಕದ್ದು.

- ಮಧುವನಗಳನ್ನು ಪ್ರಾರಂಭಿಸುವ ರೈತರಿಗೆ/ ಆಸಕ್ತರಿಗೆ ಪ್ರತಿ ಮಧುವನದಲ್ಲಿ ಕನಿಷ್ಟ 10 ಜೇನು ಕುಟುಂಬಗಳನ್ನು ಅಭಿವೃದ್ಧಿಪಡಿಸಲು ಸಹಾಯಧನ ನೀಡಲಾಗುವುದು.
- ಮಧುವನಗಳನ್ನು ಸ್ಥಾಪಿಸುವ ಫಲಾನುಭವಿಗಳು 10 ಸಂಖ್ಯೆ ISI A ಮಾದರಿಯ ಜೇನುಪೆಟ್ಟಿಗೆ ಮತ್ತು ಕುಟುಂಬ, ಅಲ್ಲದೇ 10 ಸಂಖ್ಯೆಯ ಕಬ್ಬಿಣದ ಸ್ಟಾಂಡ್ ಗಳು, ಜೇನು ತೆಗೆಯುವ ಯಂತ್ರ, ಮುಖ ಪರದೆ, ಹೊಗೆತಿದಿ, ಕೃತಕ ಎರಿ ತಳಹದಿ (CF Sheet) ಇತ್ಯಾದಿಗಳನ್ನು ಖರೀದಿಸಲು ಸಹಾಯಧನ ನೀಡಲಾಗುವುದು. ವಿವರಗಳನ್ನು ಅನುಬಂಧ-4 ರಲ್ಲಿ ಒದಗಿಸಿದೆ.
- **ಮಧುವನ ಸ್ಥಾಪನೆಗೆ ನಿಗಧಿಪಡಿಸಿದ ಗರಿಷ್ಟ ವೆಚ್ಚ ರೂ.0.51 ಲಕ್ಷಗಳು. ಪ್ರತಿ ಮಧುವನಕ್ಕೆ ಶೇ.75ರಂತೆ ರೂ. 38,250/-ಗಳ ಸಹಾಯಧನ ನೀಡಲಾಗುವುದು.**
- ಫಲಾನುಭವಿಯು ISI-A ಮಾದರಿಯ ಕಾಡುಮರದಿಂದ ಮಾಡಿದ ಹಾಗೂ ತೇಗ/ಹೊನ್ನೆ/ಮತ್ತಿ ಮರದ 8 ಚೌಕಟ್ಟುಗಳುಳ್ಳ ಜೇನು ಸಂಸಾರ ಕೋಣೆ ಮತ್ತು ಜೇನು ಕೋಣೆಯುಳ್ಳ ಜೇನುಪೆಟ್ಟಿಗೆಗಳನ್ನು ಮಾತ್ರ ಖರೀದಿಸತಕ್ಕದ್ದು.
- ಮಧುವನ ಸ್ಥಾಪನೆಗೆ ಇಚ್ಛಿಸುವ ಫಲಾನುಭವಿಗಳು ಸಲ್ಲಿಸಬೇಕಾದ ಅರ್ಜಿ ನಮೂನೆಯನ್ನು ಅನುಬಂಧ-1 ರಲ್ಲಿ ಒದಗಿಸಿದೆ.
- ರೈತರು ಖರೀದಿಸುವ ಜೇನುಪೆಟ್ಟಿಗೆಯ ಅಳತೆ ಮತ್ತು ಗುಣಮಟ್ಟದ ಬಗ್ಗೆ ಸ್ಥಳೀಯ ಜೇನು ಕೃಷಿ ಸಿಬ್ಬಂದಿ / ಆಯಾ RSK ಅಧಿಕಾರಿಗಳು ದೃಢೀಕರಿಸತಕ್ಕದ್ದು.
- ಮಧುವನ ಸ್ಥಾಪನೆಗೆ ಸಹಾಯಧನ ಪಡೆಯಲಿಚ್ಛಿಸುವ ಫಲಾನುಭವಿಯು ಕನಿಷ್ಟ ಅರ್ಧ ಎಕರೆ ಜಮೀನು ಹೊಂದಿದ್ದು, ಈ ಬಗ್ಗೆ ಕಡ್ಡಾಯವಾಗಿ ಪಹಣಿಯನ್ನು ನೀಡಬೇಕು. ಪಹಣಿ ದಿನಾಂಕ:01-01-2022 ರ ನಂತರದ್ದಾಗಿರಬೇಕು.
- ಸದರಿ ಮಧುವನಗಳಲ್ಲಿ ಕೇವಲ ಜೇನುತುಪ್ಪ ಉತ್ಪಾದನೆಗೆ ಮಾತ್ರ ಪ್ರಾಮುಖ್ಯತೆ ನೀಡದೇ, ಜೇನು ಕುಟುಂಬಗಳನ್ನು ಉತ್ಪಾದಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.
- ಸದರಿ ಮಧುವನಗಳಲ್ಲಿ ಉತ್ಪಾದಿಸಿದ ಜೇನು ಕುಟುಂಬಗಳನ್ನು ಸರ್ಕಾರದ ವಿವಿಧ ಯೋಜನೆಗಳಡಿ ಬಳಸಿಕೊಳ್ಳಲು ಆದ್ಯತೆ ನೀಡುವುದು.
- ಮಧುವನ ನಿರ್ಮಾಣಕ್ಕೆ ಕೇಂದ್ರ/ ರಾಜ್ಯ ಸರ್ಕಾರದ ಇತರ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ನೀಡುವುದು.

- ಇಲಾಖೆಯು ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳಿಗೆ ಅಗತ್ಯವಿದ್ದಲ್ಲಿ ಇಲಾಖೆ ತಿಳಿಸುವ ಫಲಾನುಭವಿಗಳಿಗೆ ಪ್ರತಿ ವರ್ಷ ನಿಗಧಿಪಡಿಸುವ ದರದಲ್ಲಿ ಜೇನುಕುಟುಂಬಗಳನ್ನು ಮಾರಾಟ ಮಾಡುವ ಬಗ್ಗೆ ಒಡಂಬಡಿಕೆಯನ್ನು ಮಾಡಿಸಿಕೊಳ್ಳತಕ್ಕದ್ದು.

## ಇಲಾಖಾ ಮಧುವನಗಳು / ಜೇನುಗಾರಿಕೆ ತರಬೇತಿ ಕೇಂದ್ರಗಳ ಅಭಿವೃದ್ಧಿ ಹಾಗೂ ನಿರ್ವಹಣೆ.

**ಉದ್ದೇಶ:** ಇಲಾಖಾ ಮಧುವನಗಳು/ ಜೇನುಗಾರಿಕೆ ತರಬೇತಿ ಕೇಂದ್ರವನ್ನು ಅಭಿವೃದ್ಧಿ ಪಡಿಸುವ ಮೂಲಕ ಜೇನುಗಾರಿಕೆ ಅಭಿವೃದ್ಧಿ ಪಡಿಸುವುದು.

ಇಲಾಖೆಯಲ್ಲಿ ಸ್ಥಾಪಿಸಿರುವ ಮಧುವನಗಳ (ಮರಿಜೇನು ಉತ್ಪಾದನಾ ಕೇಂದ್ರಗಳು) ನಿರ್ವಹಣೆಗಾಗಿ ಅನುದಾನ ಒದಗಿಸಲಾಗುವುದು. ಸದರಿ ಮಧುವನಗಳಲ್ಲಿ ವರ್ಷದ ಎಲ್ಲಾ ಕಾಲಕ್ಕೂ ಕನಿಷ್ಟ 10 ಜೇನುಕುಟುಂಬಗಳನ್ನು ನಿರ್ವಹಿಸುವಂತೆ ನೋಡಿಕೊಳ್ಳಬೇಕು. ಒಂದು ಮರಿಜೇನು ಕೇಂದ್ರದಲ್ಲಿ 10 ಜೇನು ಕುಟುಂಬದಿಂದ ಒಂದು ವರ್ಷಕ್ಕೆ ಕನಿಷ್ಟ 20 ಮರಿಜೇನು ಕುಟುಂಬಗಳನ್ನು ಉತ್ಪಾದಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

**10 ಕುಟುಂಬಗಳನ್ನೊಳಗೊಂಡ 10 ಜೇನು ಪೆಟ್ಟಿಗೆಗಳನ್ನು ಒಂದು ಘಟಕವನ್ನಾಗಿ ಪರಿಗಣಿಸಲಾಗಿದ್ದು, ಘಟಕವಾರು ನಿರ್ವಹಣೆಗೆ ಈ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ.**

**10 ಕುಟುಂಬಗಳ ಒಂದು ಘಟಕದ ನಿರ್ವಹಣೆಗೆ ಅನುದಾನ**

| ಕ್ರ.ಸಂ | ವಿವರಗಳು | ಪ್ರಮಾಣ ಮತ್ತುದರ | ಅನುದಾನ (ರೂ.ಗಳಲ್ಲಿ) |
|---|---|---|---|
| 1 | ಸಕ್ಕರೆ | 12ಕೆ.ಜಿxರೂ.40x5 ತಿಂಗಳು | 2400.00 |
| 2 | ಕೃತಕ ಎರಿ ತಳಹದಿ(C.F.sheet) | 1.5 ಕೆ.ಜಿ x ರೂ.900 | 1350.00 |
| 3 | ಇತರೆ ವೆಚ್ಚ | | 250.00 |
| **ಒಟ್ಟು** | | | **4000.00** |

- ಸದರಿ ಮಧುವನಗಳಲ್ಲಿ ಉತ್ಪಾದಿಸಲಾದ ಮರಿಜೇನು ಕುಟುಂಬ / ಜೇನುತುಪ್ಪವನ್ನು ಜಿಲ್ಲೆಯ ಹಂತದಲ್ಲಿಯೇ ನಿಯಮಾನುಸಾರ ವಿಲೇ ಮಾಡಿ ಬಂದ ಹಣವನ್ನು ಇಲಾಖೆಯ KSHDA ಖಾತೆಗೆ ಜಮಾ ಮಾಡುವುದು ಹಾಗೂ ಈ ಬಗ್ಗೆ ಪ್ರಗತಿ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಮರಿಜೇನು ಕುಟುಂಬದ ಬೆಲೆ ಈಗಾಗಲೇ ನಿರ್ಧರಿಸಲಾಗಿದ್ದು, ಪ್ರತಿ ಜೇನು ಕುಟುಂಬಕ್ಕೆ ಗರಿಷ್ಟ ರೂ.2000.00 ಹಾಗೂ ಪ್ರತಿ ಕೆ.ಜಿ ಜೇನುತುಪ್ಪಕ್ಕೆ ರೂ.300.00 ಗಳನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ದರದನ್ವಯ ಜಿಲ್ಲಾಮಟ್ಟದಲ್ಲಿ ನಿಯಮಾನುಸಾರ ವಿಲೇ ಮಾಡತಕ್ಕದ್ದು.

- ಸದರಿ ಮಧುವನಗಳಲ್ಲಿ ಉತ್ಪಾದಿಸಿದ ಮರಿ ಜೇನು ಕುಟುಂಬಗಳನ್ನು ಇಲಾಖಾ ಯೋಜನೆಗಳಡಿ ಫಲಾನುಭವಿಗಳಿಗೆ ನೀಡಬಹುದಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಇಲಾಖಾ ಸಹಾಯಧನದ ಮೊತ್ತವನ್ನು ಹೊರತುಪಡಿಸಿ ಫಲಾನುಭವಿಗಳ ಪಾಲಿನ ಮೊತ್ತವಾದ ರೂ.500/- (ಪ್ರತಿ ಕುಟುಂಬಕ್ಕೆ) ಗಳನ್ನು KSHDA ಖಾತೆಗೆ ಜಮಾ ಮಾಡುವುದು.
- ಇಲಾಖೆಯಿಂದ ಉತ್ಪಾದಿತ ಮರಿ ಜೇನು ಕುಟುಂಬಗಳನ್ನು ಪಡೆದ ಫಲಾನುಭವಿಗಳು ಕುಟುಂಬಗಳಿಗೆ ನಿಗಧಿಪಡಿಸಿದ ಇಲಾಖಾ ಸಹಾಯಧನವನ್ನು ಪಡೆಯಲು ಅರ್ಹರಿರುವುದಿಲ್ಲ.
- ಪ್ರತಿ ಜೇನು ಕುಟುಂಬಕ್ಕೆ ತಲಾ 2 ಮರಿಜೇನು ಕುಟುಂಬ ಹಾಗೂ ಪ್ರತಿ ಜೇನುಕುಟುಂಬಕ್ಕೆ 5 ಕೆ.ಜಿ ಜೇನುತುಪ್ಪದ ಗುರಿಯನ್ನು ನಿಗಧಿಪಡಿಸಲಾಗಿದೆ.

### 5. ಪ್ರಚಾರ/ಸಾಹಿತ್ಯ ಮತ್ತು ಉತ್ತೇಜನ ಚಟುವಟಿಕೆಗಳು :

**ಉದ್ದೇಶ:** ಜೇನು ಕೃಷಿಯ ಬಗ್ಗೆ ಹೆಚ್ಚಿನ ಪ್ರಚಾರ ನೀಡಲು ಅಗತ್ಯ ಪ್ರಚಾರ ಸಾಮಗ್ರಿಗಳ ಮುದ್ರಣ ಮತ್ತು ಇತರೆ ಉತ್ತೇಜನ ಚಟುವಟಿಕೆಗಳನ್ನು ಕೈಗೊಳ್ಳುವುದು.

**ಕಾರ್ಯಕ್ರಮಗಳು:**

- ಜೇನು ಕೃಷಿ ಯೋಜನೆ ಮತ್ತು ಜೇನು ಬೆಳೆಯ ವೈಶಿಷ್ಟ್ಯದ ಬಗ್ಗೆ ಪತ್ಯವನ್ನು ಸಿದ್ಧಪಡಿಸಿ ಅನುಮೋದನೆ ಪಡೆದು ಅವಶ್ಯಕತೆಯಿರುವ ಕರಪತ್ರಗಳ ಸಂಖ್ಯೆಯನ್ನು ನಿರ್ಧರಿಸಿಕೊಂಡು ಅವುಗಳನ್ನು ಮುದ್ರಿಸಲು ಸೂಕ್ತ ಪಾರದರ್ಶಕತೆಯ ನಿಯಮಾವಳಿಗಳಿಗೆ ಒಳಪಟ್ಟಂತೆ ಮುದ್ರಿಸುವುದು.
- ಇಂತಹ ಕರಪತ್ರಗಳನ್ನು ಪ್ರಮುಖ ಕಛೇರಿಗಳಲ್ಲಿ, ರೈತ ಸಂಪರ್ಕ ಕೇಂದ್ರಗಳಲ್ಲಿ, ಪ್ರಗತಿಪರ ಜೇನುಕೃಷಿಕರ ಸಂಘಗಳು ಹಾಗೂ ಇಲಾಖಾ ಕಛೇರಿಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಲಭ್ಯಗೊಳಿಸುವುದು.
- ಇಂತಹ ಕರಪತ್ರಗಳನ್ನು, ಕಿರುಹೊತ್ತಿಗೆ, flex /banners ಅಥವಾ ಇನ್ನಿತರ ಪ್ರಚಾರ ಸಾಮಗ್ರಿಗಳನ್ನು ಜಿಲ್ಲೆಯಲ್ಲಿ ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಿಸಿದ ವಸ್ತು ಪ್ರದರ್ಶನ ಮತ್ತು ಕಾರ್ಯಾಗಾರಗಳಲ್ಲಿ ರೈತರಿಗೆ ಒದಗಿಸುವುದು.
- ಜೇನು ಕೃಷಿಕರಿಗೆ ಮತ್ತು ಇಲಾಖಾಧಿಕಾರಿಗಳಿಗೆ ಜೇನು ಕೃಷಿಯ ನೂತನ ಆವಿಷ್ಕಾರಗಳನ್ನು ವಿಚಾರ ವಿನಿಮಯಗಳು/ತರಬೇತಿಗಳ ಮೂಲಕ ಪರಿಚಯಿಸುವುದು ಹಾಗೂ ಜೇನು ಕೃಷಿಯ ಉಪಕರಣಗಳ ಮತ್ತು ಜೇನುತುಪ್ಪದ ಮೌಲ್ಯಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಮಧುಮೇಳ/ಮಧು ಮಹೋತ್ಸವ ಏರ್ಪಡಿಸುವ ಮೂಲಕ ವ್ಯವಸ್ಥೆಗೊಳಿಸುವುದು.
- ಜೇನು ಕೃಷಿಯ ಪ್ರಗತಿಪರ ರೈತರ ಸಂದರ್ಶನಗಳನ್ನು ಹಾಗೂ ಜೇನು ಉತ್ಪಾದಕತೆಯನ್ನು ಹಾಗೂ ರೈತ ಸಮೂಹದಲ್ಲಿ ಜೇನುಬೆಳೆ ಅಭಿವೃದ್ಧಿಯ ಸ್ಥಿರತೆಯನ್ನು ಮೂಡಿಸಲು ಸಾಕ್ಷ್ಯಚಿತ್ರಗಳನ್ನು

ತಯಾರಿಸಿ ಕೇಬಲ್ ಟಿ.ವಿ/ದೂರದರ್ಶನ/ಆಕಾಶವಾಣಿಗಳಲ್ಲಿ ಪ್ರಚಾರ ಮಾಡಬಹುದಾಗಿದೆ. ಇತರೆ ಸಂಬಂಧಿತ ಕಾರ್ಯಕ್ರಮಗಳನ್ನು ಮಾಡಬಹುದಾಗಿರುತ್ತದೆ.

- **ಜಿಲ್ಲೆ/ತಾಲ್ಲೂಕುಗಳಲ್ಲಿ ಜೇನುಕೃಷಿ ಸೇವಾ ಸರಬರಾಜುದಾರರ (Service Providers) ಸೇವೆಯನ್ನು ಪಡೆಯಲು ಈ ಯೋಜನೆಯಡಿ ಯಾವುದೇ ಅನುದಾನದ ಅವಕಾಶ ಕಲ್ಪಿಸಿರುವುದಿಲ್ಲ.**
- ಸಂಬಂಧಪಟ್ಟ ಸಂಸ್ಥೆ/ ಜಾಹಿರಾತು ಏಜೆನ್ಸಿಗಳಿಗೆ ಕಡ್ಡಾಯವಾಗಿ ಇ.ಸಿ.ಎಸ್ ಮೂಲಕವೇ ಪಾವತಿಸತಕ್ಕದ್ದು.

**6. ಆಡಳಿತಾತ್ಮಕ ವೆಚ್ಚಗಳು :**

- ಒಟ್ಟು ಅನುದಾನದ ಶೇ.2 ರಷ್ಟು ಅನುದಾನವನ್ನು ನಿರ್ದೇಶನಾಲಯದ ಮೇಲುಸ್ತುವಾರಿ ಘಟಕದ (ತಾಳೆಬೆಳೆ ವಿಭಾಗ) ಆಡಳಿತಾತ್ಮಕ ವೆಚ್ಚಕ್ಕಾಗಿ ಉಪಯೋಗಿಸಿಕೊಳ್ಳುವುದು. ನಿರ್ದೇಶನಾಲಯದಲ್ಲಿ ಗಣಕ ಯಂತ್ರದ ಪರಿಕರಗಳು, ಲೇಖನ ಸಾಮಗ್ರಿಗಳ ಖರೀದಿ, ಇತರೆ ಅಗತ್ಯ ಸಾದಿಲ್ವಾರು ಬಿಲ್ಲುಗಳಿಗೆ ಹಾಗೂ ಯೋಜನಾ ಮೇಲುಸ್ತುವಾರಿ ಘಟಕ ವೆಚ್ಚಕ್ಕೆ ಬಳಸಿಕೊಳ್ಳುವುದು ಹಾಗೂ ಆಡಳಿತಾತ್ಮಕ ವೆಚ್ಚಗಳನ್ನು (ನಿರ್ದೇಶನಾಲಯದ ಹಂತದಲ್ಲಿ ಒಬ್ಬರು ಕಂಪ್ಯೂಟರ್ ಆಪರೇಟರ್ ರವರ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವುದು) ಭರಿಸುವುದು.
- ಜಿಲ್ಲೆಗಳಿಗೆ ಆಡಳಿತಾತ್ಮಕ ವೆಚ್ಚದಡಿ ನಿಗದಿಪಡಿಸಿದ ಅನುದಾನವನ್ನು ಯಶೋಗಾಥೆಗಳ ತಯಾರಿಕೆ, ಯೋಜನೆಯ ದಾಖಲೀಕರಣ ಲೇಖನ ಸಾಮಗ್ರಿಗಳ ಖರೀದಿ, ಇತರೆ ಅಗತ್ಯ ಸಾದಿಲ್ವಾರು ಬಿಲ್ಲುಗಳಿಗೆ ಪಾವತಿಸಲು ಬಳಸಿಕೊಳ್ಳುವುದು.

## V. <u>ಅನುದಾನ ಮತ್ತು ಸಹಾಯಧನ:</u>

- ರಾಜ್ಯ ಸರ್ಕಾರವು ಸದರಿ ಯೋಜನೆಯಡಿ 2025-26 ನೇ ಸಾಲಿಗೆ ರೂ.200.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದೆ. ಸದರಿ ಯೋಜನೆಯಡಿ ರಾಜ್ಯ ಸರ್ಕಾರದಿಂದ ಶೇ.100 ರಷ್ಟು ಅನುದಾನ ಬಿಡುಗಡೆ ಮಾಡಲಾಗುವುದು.
- ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ಜಿಲ್ಲೆಗಳಿಗೆ ಅಗತ್ಯತೆ ಅನುಸಾರ/ ಲಭ್ಯತೆ ಅನುಸಾರ ಬಿಡುಗಡೆ ಮಾಡಲಾಗುವುದು. ಈ ರೀತಿ ಜಿಲ್ಲೆಗೆ ಬಿಡುಗಡೆಯಾಗುವ ಅನುದಾನವನ್ನು ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ರವರು ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರ ಮೇಲುಸಹಿಯೊಂದಿಗೆ ಫಲಾನುಭವಿಗೆ DBT ಮುಖಾಂತರ ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡುವುದು. **ಫಲಾನುಭವಿಗಳ ಅರ್ಜಿಗಳನ್ನು ಕಡ್ಡಾಯವಾಗಿ ಇಲಾಖೆಯ ಹಸಿರು ತಂತ್ರಾಂಶದ ಮೂಲಕವೇ ಪಡೆದು ಪರಿಶೀಲಿಸಿ, ಸಹಾಯಧನವನ್ನು DBT ಮುಖಾಂತರ ಪಾವತಿಸುವುದು.**

- ಅನುದಾನವನ್ನು ಮಾರ್ಗಸೂಚಿ ಪ್ರಕಾರ ತೋಟಗಾರಿಕೆ ಉಪ ನಿರ್ದೇಶಕರು ಯೋಜನೆಯ ಅನುಷ್ಠಾನಕ್ಕೆ ಬಳಕೆ ಮಾಡುವುದು.
- ಈ ಯೋಜನೆಯಡಿ ಜೇನುಪೆಟ್ಟಿಗೆ, ಕುಟುಂಬ ಹಾಗೂ ಸ್ಟ್ಯಾಂಡ್ ಗಳ ಖರೀದಿಗೆ ಸಾಮಾನ್ಯ ರೈತರು ಶೇ.75 ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಶೇ.90 ರಷ್ಟು ಸಹಾಯಧನಕ್ಕೆ ಅರ್ಹರಿರುತ್ತಾರೆ.

## VI. <u>ಫಲಾನುಭವಿಗಳ ಅರ್ಹತೆ:</u>

1. ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿಯ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
2. ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
3. ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು.
4. ಜಮೀನು ರಹಿತ ಗ್ರಾಮೀಣ ಪ್ರದೇಶದ ಹಾಗೂ ನಗರ/ಪಟ್ಟಣ ಪ್ರದೇಶದ ಫಲಾನುಭವಿಗಳು ವಿಳಾಸ ದೃಢೀಕರಣ ಪತ್ರ ನೀಡಿ ಸೌಲಭ್ಯ ಪಡೆಯತಕ್ಕದ್ದು.
5. **ಪರಿಶಿಷ್ಟ ಜಾತಿಯವರಿಗೆ (SC) ಒಟ್ಟು ಅನುದಾನ ಕನಿಷ್ಟ ಶೇ.17.15 ರಷ್ಟು / ಪರಿಶಿಷ್ಟ ಪಂಗಡದವರಿಗೆ (ST) ಒಟ್ಟು ಅನುದಾನದ ಕನಿಷ್ಟ ಶೇ.6.95 ರಷ್ಟನ್ನು ಅಗತ್ಯತೆ ಆಧಾರದ ಮೇಲೆ ನಿಗಧಿಪಡಿಸಿಕೊಳ್ಳುವುದು. ಮಹಿಳೆಯರಿಗೆ ಕನಿಷ್ಟ ಶೇ.33, ಅಲ್ಪ ಸಂಖ್ಯಾತರಿಗೆ ಶೇ.5 ಮತ್ತು ಅಂಗವಿಕಲರಿಗೆ ಶೇ.3 ರಷ್ಟು ಅನುದಾನವನ್ನು ತಪ್ಪದೆ ಮೀಸಲಿಡಬೇಕು.**
6. ಫಲಾನುಭವಿಯು ಅರ್ಜಿಯಲ್ಲಿ ಕೋರಿರುವ ಸಹಾಯಧನವನ್ನು ಘಟಕವಾರು ವಿವರಗಳನ್ನು ಕಡ್ಡಾಯವಾಗಿ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿದಂತೆ ಅಥವಾ ಅದಕ್ಕೆ ಅನುಗುಣವಾಗಿ ಲೆಕ್ಕ ಹಾಕಿ ಸಹಾಯಧನವನ್ನು ವಿತರಿಸುವುದು.
7. ಫಲಾನುಭವಿಯು ಸಂಬಂಧಿಸಿದ ಘಟಕಕ್ಕೆ ಸಹಾಯಧನವನ್ನು ಈ ಮೊದಲು ಜೇನುಕೃಷಿಯ ಯಾವುದೇ ಯೋಜನೆ/ ಕಾರ್ಯಕ್ರಮದಡಿ ಪಡೆದಿದ್ದಲ್ಲಿ ಮತ್ತೊಮ್ಮೆ ಸದರಿ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.

## VII. ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ

1. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು(ಜಿಪಂ) ರವರು ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯಲ್ಲಿ ಸ್ಥಳೀಯ ಪತ್ರಿಕೆಗಳ ಮುಖಾಂತರವಾಗಿ ಹಾಗೂ ಕಛೇರಿಗಳ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
2. ಅಧಿಸೂಚನೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು.
3. ಆಸಕ್ತಿಯುಳ್ಳ ರೈತರು ಅರ್ಜಿಯನ್ನು (ಅರ್ಜಿ ನಮೂನೆ ಅನುಬಂಧ-1 ರಲ್ಲಿ ಒದಗಿಸಿದೆ) ಭರ್ತಿ ಮಾಡಿ ನಮೂದಿಸಿದ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ ಕಛೇರಿಗೆ ಸಲ್ಲಿಸುವುದು. ಜಮೀನುರಹಿತ ಜೇನು ಕೃಷಿ ಆಸಕ್ತ ಫಲಾನುಭವಿಗಳು ವಿಳಾಸ ದೃಢೀಕರಣ ನೀಡಬೇಕು. ಇಲಾಖೆಯ FID ನಲ್ಲಿ ಈಗಾಗಲೇ ನೋಂದಣಿ ಮಾಡಿಕೊಂಡ ಫಲಾನುಭವಿಗಳು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸುವುದು. FID ನಡಿ ನೋಂದಣಿಯಾಗದ ಫಲಾನುಭವಿಗಳು ಮೊದಲು FID ಅಡಿ ನೋಂದಣಿ ಮಾಡಿಕೊಂಡು ನಂತರ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವುದು.

   ಈ ಎಲ್ಲಾ ದಾಖಲಾತಿಗಳನ್ನು ಇಲಾಖೆಯ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು/ ಜೇನು ಕೃಷಿ ಸಿಬ್ಬಂದಿ ಸಂಬಂಧಪಟ್ಟ ತಾಲ್ಲೂಕಿನ ಹಿ.ಸ.ತೋ.ನಿ ರವರಿಗೆ ಸಲ್ಲಿಸತಕ್ಕದ್ದು.
4. ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು/ ಜೇನುಕೃಷಿ ಸಿಬ್ಬಂದಿ ಫಲಾನುಭವಿಗಳೊಂದಿಗೆ ತಾಕುಗಳನ್ನು ಪರಿಶೀಲಿಸಿ ಅಗತ್ಯವಾದ ಜೇನು ಪೆಟ್ಟಿಗೆ /ಕುಟುಂಬ/ಸ್ಟ್ಯಾಂಡ್ ಗಳ ಬಗ್ಗೆ/ ಮಧುವನ ನಿರ್ಮಾಣದ ಬಗ್ಗೆ ಸೂಕ್ತ ಶಿಫಾರಸ್ಸು ಮಾಡಿ ಅನುಷ್ಠಾನದ ವಿವರ ಹಾಗೂ ಫಲಾನುಭವಿಗಳ ಸಮೇತ ಫೋಟೊ ತೆಗೆದು, ಫೋಟೊ ಹಾಗೂ ವರದಿಯನ್ನು ಹಿಸತೋನಿ ದೃಢೀಕರಣದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು (5 ದಿನಗಳೊಳಗಾಗಿ).
5. ರೈತರು ಸಲ್ಲಿಸುವ ಪ್ರತಿಯೊಂದು ಸಹಾಯಧನ ಅರ್ಜಿ ಮತ್ತು ದಾಖಲಾತಿಗಳನ್ನು ನಿಗಧಿತ ದಿನಾಂಕದೊಂದಿಗೆ ಕಡ್ಡಾಯವಾಗಿ GST ಸಂಖ್ಯೆ/ ಮಾರಾಟ ತೆರಿಗೆ ಸಂಖ್ಯೆ ನಮೂದಿಸಿರುವ ಬಿಲ್ ನೊಂದಿಗೆ ಸಲ್ಲಿಸುವುದು.
6. ಪ್ರತಿ ಅರ್ಜಿಯನ್ನು ಕಾರ್ಯ ನಿರ್ವಹಿಸುವ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು/ ಜೇನುಕೃಷಿ ಸಿಬ್ಬಂದಿ ಕಡ್ಡಾಯವಾಗಿ (ಶೇ.100 ರಷ್ಟು) ತಾಕು ಪರಿಶೀಲನೆ ನಡೆಸಬೇಕು.

7. ಈ ರೀತಿ ಪರಿಶೀಲಿಸಿದ ತಾಕುಗಳ ಪೈಕಿ ಕನಿಷ್ಟ ಶೇ.50 ರಷ್ಟು ತಾಕುಗಳನ್ನು ತಾಲ್ಲೂಕು ಹಿಸತೋನಿ ರವರು ಪರಿಶೀಲಿಸಬೇಕು. ಜೇನುಕೃಷಿ ಸಿಬ್ಬಂದಿಗಳು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರೂ ನ್ಯೂನತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು.
8. ಜಿಲ್ಲೆಯ ತೋಉನಿ(ಜಿಪಂ) ರವರು ಶೇ.10 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಹಿಸತೋನಿರವರು ಪರಿಶೀಲಿಸಿದ ಅರ್ಜಿಗಳನ್ನು ಯಾವುದಾದರೂ ನ್ಯೂನತೆಗಳಿದ್ದರೆ ಹಿಸತೋನಿರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು.
9. ರೈತರು ಬೆಳೆಯನ್ನು ಪಹಣಿಯಲ್ಲಿ ನಮೂದಿಸದೇ ಇರುವ ಪಕ್ಷದಲ್ಲಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು/ ಜೇನು ಕೃಷಿ ಸಿಬ್ಬಂದಿ ಬೆಳೆಯನ್ನು ದೃಢೀಕರಿಸಿದ ಅರ್ಜಿಗಳನ್ನು ಸಹಾಯಧನ ಲೆಕ್ಕಾಚಾರ ಮಾಡಲು ಪರಿಗಣಿಸುವುದು.

## VIII. ತಾಂತ್ರಿಕ ಪರಿಶೀಲನಾ ಕ್ರಮಗಳು :

ತಾಕು ಪರಿಶೀಲನೆ ಸಮಯದಲ್ಲಿ ಅನುಷ್ಠಾನಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.

1. ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು/ ಜೇನುಕೃಷಿ ಸಿಬ್ಬಂದಿಗಳು ಫಲಾನುಭವಿಗಳು ಜೇನು ಕುಟುಂಬಗಳನ್ನಿಡಲು ಆಯ್ಕೆ ಮಾಡಿಕೊಂಡಿರುವ ಸ್ಥಳಗಳ 2 ಕಿ.ಮಿ ವ್ಯಾಪ್ತಿಯಲ್ಲಿ ಜೇನು ಕೃಷಿಗೆ ಅನುಗುಣವಾದ ಪರಾಗ ಮತ್ತು ಪುಷ್ಪ ರಸ ಯಥೇಚ್ಛವಾಗಿ ಲಭ್ಯವಿರುವುದನ್ನು ಖಾತ್ರಿ ಪಡೆಸಿಕೊಳ್ಳುವುದು.

2. ಜೇನುಕುಟುಂಬಗಳಿಗೆ ಸಮೀಪದಲ್ಲಿ ಶತ್ರುಗಳ ಕಾಟ ಇಲ್ಲದಿರುವುದನ್ನು ದೃಢೀಕರಿಸಿಕೊಂಡು ಅಗತ್ಯ ನಿವಾರಣಾ ಕ್ರಮಗಳ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡುವುದು.

3. ಫಲಾನುಭವಿಯು ISI-A ಮಾದರಿಯ ಕಾಡುಮರದಿಂದ ಮಾಡಿದ ಹಾಗೂ ತೇಗ /ಹೊನ್ನೆ/ ಮತ್ತಿ ಮರದ 8 ಚೌಕಟ್ಟುಗಳುಳ್ಳ ಜೇನು ಸಂಸಾರ ಕೋಣೆಯುಳ್ಳ ಜೇನು ಪೆಟ್ಟಿಗೆಗಳನ್ನು ಮಾತ್ರ ಖರೀದಿಸಿರುವ ಬಗ್ಗೆ ಹಾಗೂ ಪ್ರತಿ ಜೇನು ಕುಟುಂಬದಲ್ಲಿಸುಮಾರು 4 ಫ್ರೇಂ ಗಳಷ್ಟು ಕೆಲಸಗಾರ ಜೇನು ದುಂಬಿಗಳು ಹಾಗೂ ಒಂದು ಪರಿಪಕ್ವವಾದ ರಾಣಿ ಜೇನುದುಂಬಿ ಕಡ್ಡಾಯವಾಗಿ ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

4. ಜೇನು ಕುಟುಂಬಕ್ಕೆ ಅಗತ್ಯವಾದ ನೀರು/ನೆರಳು/ಅವಶ್ಯಕತೆಗಳು ಎಲ್ಲಾ ಕಾಲದಲ್ಲೂ ಸಿಗುವಂತೆ ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

5. ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು/ಜೇನು ಕೃಷಿ ಸಿಬ್ಬಂದಿ ಫಲಾನುಭವಿಗಳ ತಾಕುಗಳಿಗೆ ನಿಯಮಿತವಾಗಿ ತಪ್ಪದೇ ಭೇಟಿ ನೀಡಿ ಅಗತ್ಯ ತಾಂತ್ರಿಕ ಮಾಹಿತಿಗಳನ್ನು ನೀಡುವುದು ಹಾಗೂ ಈ ಬಗ್ಗೆ ತಪ್ಪದೇ ತಮ್ಮ ದಿನಚರಿಯಲ್ಲಿ ನಮೂದಿಸುವುದು.

6. ಉಪ ನಿರ್ದೇಶಕರು ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಿ ನಿರ್ದೇಶನಾಲಯದ ಅನುಮೋದನೆ ಅವಶ್ಯಕತೆ ಇಲ್ಲದಿದ್ದಲ್ಲಿ ತಮ್ಮ ಹಂತದಲ್ಲಿ ಕಡ್ಡಾಯವಾಗಿ 10 ದಿನದ ಒಳಗೆ ಅನುಮೋದನೆ ನೀಡತಕ್ಕದ್ದು.

## IX. <u>ನಿರ್ದೇಶನಾಲಯದ ಅನುಮೋದನೆ:</u>

- ನಿರ್ದೇಶನಾಲಯದ ಅನುಮೋದನೆ ಅವಶ್ಯಕತೆ ಇದ್ದಲ್ಲಿ ಅಗತ್ಯ ದಾಖಲಾತಿಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ಅರ್ಹತೆ ಇದ್ದಲ್ಲಿ ಮಾತ್ರ ಪ್ರತಿಯೊಂದು ದಾಖಲಾತಿಗಳನ್ನು ದೃಢೀಕರಿಸಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
- ಯಾವುದಾದರೂ ಜಿಲ್ಲೆಗಳಿಂದ ಅರ್ಹತೆ ಹೊಂದಿಲ್ಲದ, ನಿಗಧಿಪಡಿಸಿದ ಸಮಯದ ನಂತರ ವಿಳಂಬವಾಗಿ ಅಥವಾ ಅಪೂರ್ಣವಾದ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಸಂಬಂಧಪಟ್ಟ ತೋಟಗಾರಿಕೆ ಉಪ ನಿರ್ದೇಶಕರು ಮತ್ತು ಸಂಬಂಧಪಟ್ಟ ಕೇಂದ್ರ ಕಛೇರಿ ಸಹಾಯಕರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

## X. <u>ಸಹಾಯಧನ ವಿತರಣೆ:</u>

ಜಿಲ್ಲೆಯ ತೋಉನಿ, (ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದ್ದಲ್ಲಿ ಮಾತ್ರ ಸಹಾಯಧನದ ಮೊತ್ತವನ್ನು ಈ ಕೆಳಕಂಡ ಯಾವುದಾದರೂ ಒಂದು ವಿಧಾನದಲ್ಲಿ ಬಿಡುಗಡೆ ಮಾಡುವುದು.

1. ಘಟಕದ ಅಳವಡಿಕೆಯ ಪೂರ್ಣ ವೆಚ್ಚವನ್ನು ರೈತ ಫಲಾನುಭವಿಯು ಭರಿಸಿದ್ದಲ್ಲಿ ಸಹಾಯಧನ ಮೊತ್ತವನ್ನು ಫಲಾನುಭವಿಯ ಖಾತೆಗೆ ನೇರವಾಗಿ ಇಲಾಖೆಯ **"ಹಸಿರು"** ತಂತ್ರಾಂಶದ ಮೂಲಕ ಪರಿಶೀಲಿಸಿ DBT ಮುಖಾಂತರ ಜಮಾ ಮಾಡುವುದು.
2. ಫಲಾನುಭವಿಯು ಯಾವುದಾದರೂ ಬ್ಯಾಂಕ್ ನಿಂದ ಸಾಲ ಪಡೆದಿದ್ದಲ್ಲಿ ಸಹಾಯಧನ ಮೊತ್ತವನ್ನು ಸಂಬಂಧಿಸಿದ ಸಾಲದ ಖಾತೆಗೆ ಜಮಾ ಮಾಡುವುದು.

## XI. <u>ಅನುಷ್ಠಾನ ವೇಳಾ ಪಟ್ಟಿ:</u>

1. ಯೋಜನೆಗೆ ನಿಗಧಿಪಡಿಸಿದ ಅನುಷ್ಠಾನ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನಗೊಳಿಸತಕ್ಕದ್ದು.

2. ಫಲಾನುಭವಿ ತಮ್ಮ ಕ್ಷೇತ್ರದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಿದ 30 ದಿನಗಳ ಒಳಗಾಗಿ ಸಹಾಯಧನವನ್ನು ಫಲಾನುಭವಿ ಖಾತೆ/ ಸಾಲದ ಖಾತೆಗೆ ಜಮಾ ಮಾಡತಕ್ಕದ್ದು. ಈ ಬಗ್ಗೆ ಸಂಬಂಧಿಸಿದ ಹಿಸತೋನಿ ಹಾಗೂ ತೋಉನಿ (ಜಿಪಂ) ರವರು ವೈಯಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.
3. ಜುಲೈ, 2025 ರ ಮಾಹೆಯಲ್ಲಿ ಅಗತ್ಯವಾದ ಜೇನುಪೆಟ್ಟಿಗೆ ಹಾಗೂ ಜೇನು ಉಪಕರಣಗಳನ್ನು ಖರೀದಿಸತಕ್ಕದ್ದು.
4. ಅಕ್ಟೋಬರ್ 2025 ರ ಮಾಹೆಯಲ್ಲಿ ಎಲ್ಲಾ ಜೇನುಪೆಟ್ಟಿಗೆಗಳಿಗೆ ಜೇನುಕುಟುಂಬಗಳನ್ನು ಸೇರಿಸತಕ್ಕದ್ದು ಮತ್ತು ಮಧುವನಗಳ ಅಭಿವೃದ್ಧಿಕಾರ್ಯ ಪೂರ್ಣಗೊಳಿಸುವುದು.
5. ಎಲ್ಲಾ ತರಬೇತಿಗಳನ್ನು ನವೆಂಬರ್ 2025 ನೇ ಮಾಹೆಯ ಒಳಗೆ ಪೂರ್ಣಗೊಳಿಸತಕ್ಕದ್ದು.
6. ಜನವರಿ ಮತ್ತು ಫೆಬ್ರವರಿ 2026 ನೇ ಮಾಹೆಯಲ್ಲಿ ಮಧುಮೇಳ/ ಮಧು ಮಹೋತ್ಸವ ಆಯೋಜಿಸುವುದು, ಸಹಾಯಧನ ನೀಡುವ ಕಾರ್ಯಕ್ರಮಗಳನ್ನು ಪೂರ್ಣಗೊಳಿಸತಕ್ಕದ್ದು.
7. ಮಾರ್ಚ್ 2026 ರ ಮೊದಲನೇ ವಾರದೊಳಗಾಗಿ ನೀಡಲಾಗಿರುವ ಗುರಿಯನ್ನು ಪೂರ್ಣವಾಗಿ ಸಾಧಿಸತಕ್ಕದ್ದು.

## XII. ಅನುಬಂಧಗಳು:

1. ಅರ್ಜಿ ನಮೂನೆ-1.
2. 2A -ISI A ಮಾದರಿಯ ಜೇನು ಪೆಟ್ಟಿಗೆಯ ಭಾಗಗಳು ಹಾಗೂ ಅಳತೆ ವಿವರಗಳು
   2B- ಕಬ್ಬಿಣದ ಸ್ಟ್ಯಾಂಡ್ ಅಳತೆಯ ವಿವರ
   2C- ಜೇನು ಪೆಟ್ಟಿಗೆಗಳಿಗೆ ನಾಮ ಫಲಕ ಅಳವಡಿಕೆಯ ಮಾದರಿ
3. ಜೇನು ಪೆಟ್ಟಿಗೆಗಳ ಯೋಜನೆವಾರು ಕೋಡಿಫಿಕೇಷನ್ ವಿವರ.
4. ಮಧುವನಗಳ ನಿರ್ಮಾಣಕ್ಕೆ ನಿಗಧಿಪಡಿಸಿದ ವೆಚ್ಚದ ವಿವರ.

## XIII. ಆರ್ಥಿಕ ಪ್ರತ್ಯಾಯೋಜನೆ (Delegation of Power):

ಈ ಯೋಜನೆಯ ರಾಜ್ಯವಲಯ ಯೋಜನೆಯಾಗಿರುತ್ತದೆ. ಈ ಯೋಜನೆಯ ಅನುದಾನವನ್ನು ಲೆಕ್ಕ ಶೀರ್ಷಿಕೆ:2851-00-200-0-01 ಅಡಿ ಬಿಡುಗಡೆಯಾದ ಅನುದಾನವನ್ನು ನಿಯಮಾನುಸಾರ ಸಾದಿಲ್ವಾರು ಬಿಲ್ಲು ಮತ್ತು ಮಂಜೂರಾತಿಗಳೊಡನೆ ಖಜಾನೆ ಮೂಲಕ ಡ್ರಾ ಮಾಡಿಕೊಳ್ಳುವುದು. ಮಂಜೂರಾತಿ ನೀಡಲು ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ-2 ಟಿಎಫ್ ಪಿ 2010, ದಿ: 30.04.2010 ರ ಕ್ರಮ ಸಂಖ್ಯೆ 11 ರ ಅನ್ವಯ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು ಹಾಗೂ ಮಾರ್ಗಸೂಚಿಯಂತೆ ಮಂಜೂರು ಮಾಡಲು ತೋಉನಿ(ಜಿಪಂ) ರವರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

## VIX. Reporting and documentation (ವರದಿ ಮಾಡುವುದು ಮತ್ತು ದಾಖಲೆ ನಿರ್ವಹಿಸುವುದು).

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇ-ಮೇಲ್ ಮೂಲಕ ತಿಂಗಳ 3 ನೇ ದಿನಾಂಕದ ಒಳಗಾಗಿ ತಪ್ಪದೇ ಸಲ್ಲಿಸುವುದು.
2. ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನೆಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

Digitally signed by
RAMESH DODDAMETIKURKE
Date: 06-05-2025 17:27:57

**ನಿರ್ದೇಶಕರು**